INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -4, July--August, 2025
PageNo,17-25
Peer -Reviewed, Refereed Journal

# ಹೋರಾಟದ ಹಾಡುಗಳಲ್ಲಿ ಅಂಬೇಡ್ಕರ್ ಚಿಂತನೆ ಕುರಿತ ಅವಲೋಕನ

ಶೇಷಣ್ಣಸ್ವಾಮಿ.ಕೆ.ಎಂ.[1]

ವಿಶ್ವಜ್ಞಾನಿ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಬಯಸಿದ್ದು ಸಮಸಮಾಜ ನಿರ್ಮಾಣ. ಅದಕ್ಕಾಗಿ ಅವರು ಜೀವನ ಪರ್ಯಂತ ಹೋರಾಡಿದವರು. ಹಲವಾರು ಅವಮಾನಗಳನ್ನು ಅನುಭವಿಸಿದರು. ಸಮಾಜದಲ್ಲಿದ್ದ ಅಸಮಾನತೆಗೆ ಮೂಲ ಕಾರಣವನ್ನು ಭೇದಿಸಿದರು, ಸಂಶೋಧಿಸಿದರು. ಉತ್ತರವನ್ನು ಹುಡಿಕಿದರು. ಜಾತಿ ಹಿಂದೂ ಮೂಲಭೂತವಾದಿಗಳು ಆಶ್ಚರ್ಯಪಟ್ಟ ತಮ್ಮ ಬಾಯಿಮುಚ್ಚಿಕೊಳ್ಳುವಂತೆ ಮಾಡುವಲ್ಲಿ ಸಫಲವಾದರು.

ಭಾರತವೆಂಬ ಮಹಾಮನೆಯ ಬಿರುಕನ್ನು ಕರೆದು ತೆರೆದು ತೋರಿಸಿದರು. ಶಿಕ್ಷಣವೆಂಬ ಅಸ್ತ್ರವೇ ಇದಕ್ಕೆ ಚಿಕಿತ್ಸೆಯೆಂದು ಚಿಂತಿಸಿದರು. ತಾವು ಮೊದಲು ಅಕ್ಷರವೆಂಬ ಅಕ್ಷಯ ಪಾತ್ರೆಯನ್ನು ದಕ್ಕಿಸಿಕೊಂಡರು. ಪ್ರಪಂಚದ ವಿವಿಧ ಧರ್ಮಗಳ, ವಿವಿಧ ಜನಾಂಗಗಳ ಸಾಂಸ್ಕೃತಿಕ ಆಯಾಮಗಳನ್ನು ನ್ಯಾಯ ನಿಬಂಧನೆಗಳನ್ನು ಅವಲೋಕಿಸಿದರು. ವೇದ, ಪುರಾಣ, ಆಗಮಗಳನ್ನು, ರಾಮಾಯಣ, ಮಹಾಭಾರತಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದರು. ಜಾತಿ, ವರ್ಗ ಮತ್ತು ವರ್ಣಭೇದಗಳ ಕುಟಿಲ ನೀತಿಯ ಅಸಲಿ ಮರ್ಮವನ್ನು ಜನಸಮುಆಯಕ್ಕೆ ಬೋಧಿಸಿದರು.

ಮಹಾಗುರು ಬುದ್ಧರ ಅನುಯಾಯಿಗಳಾದರು. ಅವರು ಬೋಧಿಸಿದ ಉದಾತ್ತ ಸದ್ಗುಣ ತ್ರಿಪಿಟಕಗಳಿಗೆ ಸಮಾನ ಶಿಕ್ಷಣ, ಸಂಘಟನೆ, ಹೋರಾಟವೆಂಬ ತ್ರಿಸೂತ್ರವನ್ನು ದಮನಿತ ಸಮುದಾಯಗಳ ಏಳ್ಗೆಗಾಗಿ ಪರಿಪಾಲಿಸುವಂತೆ ಕರೆ ನೀಡಿದರು. ಭಾರತದ ರಥಯಾತ್ರೆಯ ಕೀಲಿಕೈನಂತಿರುವ ಸಂವಿಧಾನವನ್ನು ರಚಿಸುವುದರ ಮೂಲಕ ದಲಿತ ಕಾವ್ಯ (ಹೋರಾಟದ ಹಾಡು)ಗಳಿಗೆ ಹೆಚ್ಚು ಪ್ರೇರಣೆಯಾಯಿತು. ಅದುವರೆಗಿನ ಕೃತಿಗಳಲ್ಲಿಯ ಕೃತಿಮತನವನ್ನು ಜೆಳ್ಳನ್ನು ತೂರಿದರು, ಪೊಳ್ಳನ್ನು ಕುಟ್ಟಿದರು.

ಶಿಕ್ಷಣದ ಮಹತ್ವವನ್ನು ಸಾರಿ ಹೇಳಿದರು. ದಮನಿತ ಜನಸಮುದಾಯಗಳ ಆಶಾಕಾರಣವಾಗಿ, ದಾರಿದೀಪವಾಗಿ ನಿಂತರು. ನಿರಕ್ಷರ ಕುಷಿಗಳಲ್ಲಿ ಅಕ್ಷರದ ಮಹತ್ವವನ್ನು ಅಕ್ಷರವೇ ಅನ್ನ ಅರಿವು ಎಂಬುದನ್ನು ಮನಗಾಣುವಂತೆ ಮಾಡಿದರು. ತತ್ಪರಿಣಾಮವಾಗಿ ಶಾಲೆಗಳ ಮೆಟ್ಟಿಲತ್ತದ ಶೋಷಿತ

---

1. ಸಂಶೋಧನಾ ವಿದ್ಯಾರ್ಥಿ,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ,ಮಾನಸ ಗಂಗೋತ್ರಿ, ಮೈಸೂರು

ಜನಸಮುದಾಯದ ಮಂದಿಯಲ್ಲಿ ಹೊಸ ಲೋಕವೊಂದು ತೆರೆದುಕೊಂಡಿತು. ಹೊಸ ಬೆಳಕೊಂದು ಮೂಡಿತು. ತಮ್ಮ ಪಾಡನ್ನು ಹಾಡಾಗಿಸಿದರು. ಅಂಬೇಡ್ಕರ್ ಅವರ ಆಶಯವನ್ನು ಅಕ್ಷರ ಸಹ ಪಾಲಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾದರು. ಈ ಹೋರಾಟದ ಹಾಡುಗಳಿಗೆ ಪ್ರೇರಣೆಯಾದುದು ಅಂಬೇಡ್ಕರ್ ಅವರ ಚಿಂತನೆ. ತಾವೂ ಮನುಷ್ಯರೇ ಎಂಬುದನ್ನು ಮರೆತು ಪಶು ಸಮಾನರಾಗಿ ನಾಯಿಗಿಂತ ಕೀಳಾಗಿ, ಗುಲಾಮರಾಗಿ ಉಳ್ಳವರ ಮನೆಯ ಕಾವಲು ನಾಯಿಗಳಾಗಿ ಬಾಳುವ ತನ್ನವರ ಹಲವಾರು ತಲೆಮಾರುಗಳ ಬದುಕು ಬವಣೆ ಎಂತಹ ನಿಕೃಷ್ಟವಾದುದು ಎಂಬುದು ಅರಿವಿಗೆ ಬಂದಾಗ ಸಿಡಿದೆದ್ದರು. ಅಕ್ಷರವೆಂಬ ಆಯುಧವನ್ನಿಡಿದು ಊರೂರು ಕೇರಿ ಕೇರಿ ಸುತ್ತಿದ್ದರು. ಸಂಘಟಿತರಾದಾಗಲು ಪ್ರೇರಣೆ ನೀಡುವ ಹಾಡುಗಳನ್ನು ಆಶು ಕವಿತೆಯಾಗಿ ರಚಿಸಿದರು, ಹಾಡಿದರು. ಅಂಬೇಡ್ಕರ್ ಚಿಂತನೆಯನ್ನು ಮನ ಮನದಲ್ಲಿ ಮನೆ ಮನೆಯಲ್ಲಿ ಬಿತ್ತಿದರು.

"ದಲಿತ ಪಜ್ಞೆಯನ್ನು ಮೈಗೂಡಿಸಿಕೊಂಡು ಬರೆಯ ಹೊರಟ ದಲಿತ ಬರಹಗಾರರಿಗೆ ಮುಖ್ಯವಾಗಿ ಪ್ರೇರಣೆ ದೊರೆತದ್ದು ಮಹಾರಾಷ್ಟ್ರದ ದಲಿತ ಪ್ಯಾಂಥರ್ ಚಳವಳಿಯಿಂದ. ಇದು ಉತ್ತರ ಕರ್ನಾಟಕದ ಲೇಖಕರ ಮೇಲೆ ಮೊದಲು ಪ್ರಭಾವ ಬೀರಿತು. ಅನಂತರ ಕರ್ನಾಟಕದ ಉಳಿದ ಭಾಗಗಳನ್ನು ಆವರಿಸಿಕೊಂಡಿತು. ಪ್ಯಾಂಥರ್ಸ್ ಚಳವಳಿಯು, ಹಿಂದೂ ಧರ್ಮದ ಅನಿಷ್ಟಗಳಾದ ಚಾತುರ್ವರ್ಣ, ಜಾತೀಯತೆ, ಅಸ್ಪೃಶ್ಯತೆ, ದೇವರ ಪರಿಕಲ್ಪನೆ, ಧರ್ಮ, ದಬ್ಬಾಳಿಕೆ, ಅಮಾನುಷ್ಯಕರವಾದ ದೌರ್ಜನ್ಯ ಮತ್ತು ಬ್ರಾಹ್ಮಣರು, ಬ್ರಾಹ್ಮಣೇತರರನ್ನು ವಂಚಿಸುವುದರ ವಿರುದ್ಧ ಪ್ರತಿಭಟಿಸಿ ನಡೆಸಿದ ಚಳವಳಿಯಾಗಿದೆ. ಅಂಬೇಡ್ಕರ್ ಕನಸಿನ ಕೂಸಾದ ರಿಪಬ್ಲಿಕನ್ ಆಫ್ ಇಂಡಿಯಾ ನಾಯಕತ್ವದ ಗೊಂದಲದಲ್ಲಿ ದಲಿತರ ಹಿತಾಸಕ್ತಿ ಕಡೆಗಣಿಸಲಾಗಿ ಇದನ್ನು ವಿರೋಧಿಸಿ ಪ್ಯಾಂಥರ್ಸ್ ದಲಿತ ನಿಷ್ಠೆಯಿಂದ ಕ್ರಿಯಾಶೀಲವಾಗ ಬೇಕಾಯಿತು. ಜಮೀನ್ದಾರರದು ಬಂಡವಾಳಶಾಹಿ ನೌಕರಶಾಹಿ ಮತ್ತು ಸವರ್ಣೀಯರ ದೌರ್ಜನ್ಯಗಳನ್ನು ಎದುರಿಸಲು ಈ ಸಂಘಟನೆ ವ್ಯಾಪಕ ಕಾರ್ಯಕ್ರಮಗಳನ್ನು ಹಾಕಿಕೊಂಡಿತು"[1] ಮುಂದೆ ಪ್ಯಾಂಥರ್ಸ್ ಉಗ್ರ ಸ್ವರೂಪದ ಚಳವಳಿ ಕೈಗೊಂಡಿತು. ದಲಿತರ ಭವಿಷ್ಯ ಅವರ ಕೈಯಲ್ಲಿಯೇ ಇರಬೇಕು ಎಂದು ದಲಿತರ ಮೇಲೆ ಮೇಲ್ಜಾತಿಯವರು ಕಟ್ಟಿದ ಭೋಗ ಜೀವನವನ್ನು ಈ ಬ್ರಾಹ್ಮಣರ ಸಾಹಿತ್ಯ, ಸದಾಶಿವ ಪೇಟ ಸಾಹಿತ್ಯ ಚಿತ್ ಪಾವನ ಬ್ರಾಹ್ಮಣರ ಸಾಹಿತ್ಯ ಎಂಬುದಾಗಿ ಖಂಡಿಸಿದ್ದು ಉಂಟು. ಇದು ಕನ್ನಡ ದಲಿತ ಕಾವ್ಯದ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿತು.

"ಜನಪದ ದೃಷ್ಟಿಯ ದಲಿತ ಕವಿಗಳು ಜನಸಾಮಾನ್ಯರಿಗೂ ಅರ್ಥವಾಗುವ ಕಾವ್ಯವನ್ನು ರಚಿಸಿದರಲ್ಲದೆ ಶೋಷಿತರೆಲ್ಲರನ್ನೂ ಆ ನೆಲೆಯಿಂದ ಬಡಿದೆಬ್ಬಿಸಿ ಅವರಿಗೆ ತನ್ನತ್ವದ ಅರಿವನ್ನು ಹುಟ್ಟಿಸಲು ಅವರಾಡುವ ಭಾಷೆ ಜನಪದ ನುಡಿ–ನುಡಿಗಟ್ಟು ಹಾಗೂ ಪ್ರತಿಮೆ ಪ್ರತೀಕಗಳಿಗಿಂತ ಹೆಚ್ಚಾಗಿ ವಾಸ್ತವಿಕ

ವ್ಯಕ್ತಿ, ಘಟನೆಗಳನ್ನೇ ತಮ್ಮ ಕಾವ್ಯದ ಮುಖ್ಯ ವಸ್ತುಗಳನ್ನಾಗಿ ರೂಪಿಸಿಕೊಂಡರು. ಹೀಗಾಗಿ ಒಮ್ಮಿಂದೊಮ್ಮೆಲೇ ಒಟ್ಟು ಕಾವ್ಯವೇ ಜನರಪರವಾಗುವುದಿರಲಿ ಜನತೆಯೇ ಆಗಿ ಮಾರ್ಪಟ್ಟಿತು"[2] ಇದೇ ಸಂದರ್ಭದಲ್ಲಿ ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್, ಮಾವೋ ಮುಂತಾದವರ ವಿಚಾರಧಾರೆ ಮತ್ತು ಅವರ ಕ್ರಾಂತಿಕಾರಕ ಧೋರಣೆಗಳು ಕನ್ನಡದ ಕವಿಗಳ ಮೇಲೆ ವಿಶೇಷವಾದ ಪ್ರಭಾವವನ್ನು ಮೂಡಿಸಿದ್ದು ಹೊಸ ಕಾವ್ಯದ ಸೃಷ್ಟಿಗೆ ಪ್ರೇರಣೆಯಾಯಿತು.

ಒಟ್ಟಿನಲ್ಲಿ ಉರಿಯುತ್ತಿರುವ ಸಾಮಾಜಿಕ ವ್ಯವಸ್ಥೆಯನ್ನು ದೂರದಿಂದ ನಿಂತು ನೋಡದೆ, ಹತ್ತಿರಕ್ಕೆ ಹೋಗಿ ಆ ಧಗೆಯಲ್ಲಿ ಪಾಲ್ಗೊಂಡು ಸಾವಿರಾರು ವರ್ಷಗಳಿಂದ ಶೋಷಣೆಯ ಕರಿನೆರಳಿನಲ್ಲಿ ಸಿಕ್ಕು ನರಳುತ್ತ ಬಂದ ದೀನ ದಲಿತರ ಶೋಷಿತ ಜನಾಂಗದ ಜೀವನಕ್ಕೆ ಸ್ಪಂದಿಸುವ ಶೋಷಣೆಯ ಅರಿವನ್ನು ಗಾಢವಾಗಿ ಅನುಭವಿಸಿದ, ಅವ್ಯವಸ್ಥೆಯ ವಿರುದ್ಧ ರೊಚ್ಚಿಗೆದ್ದು ಬೀದಿಗಿಳಿದು ಸ್ವರಚನೆಯ ಕ್ರಾಂತಿಕಾರಕ ಹೋರಾಟದ ಹಾಡುಗಳು ಸಿಡಿಗುಂಡುಗಳಂತೆ ಉದಯಿಸಿ ದಾವಿಸಿ ಬಂದವು.

ವಾಸ್ತವವಾಗಿ ಹೋರಾಟಗಳು ದೊಡ್ಡ ಚಳವಳಿಯೊಂದರ ಬಿಡಿಭಾಗಗಳು. ಹೋರಾಟಗಳಿಗೆ ತನ್ನದೇ ಆದ ಸಿದ್ಧಾಂತ ಮತ್ತು ಕಾರ್ಯಾಚರಣೆಗಳು ಇರುತ್ತದೆ. ಕವಿ ಚರಬಂಡರಾಜು "ಹಾಡು 'ಆಕ್ಸಿಜನ್', 'ಹೋರಾಟವೇ ಡೈರೆಕ್ಷನ್' ಎಂದು ಹೇಳಿದ್ದಾರೆ." ಚಾರಿತ್ರಿಕವಾಗಿ ಸೈದ್ಧಾಂತಿಕ ಸ್ಪಷ್ಟತೆಯಿಂದ ಹೇಳುವುದಾದರೆ ಕರ್ನಾಟಕದಲ್ಲಿ ಹೋರಾಟದ ಹಾಡುಗಳಿಗೆ ಜನ್ಮ ನೀಡಿದ್ದು ಕರ್ನಾಟಕ ದಲಿತ ಸಂಘರ್ಷ ಸಮಿತಿ. ಪ್ರಾರಂಭದ ಹಂತದ ಡಿ.ಎಸ್.ಎಸ್.ನ ಪ್ರತಿಯೊಂದು ಸಭೆಗಳೂ ಹೋರಾಟದ ಹಾಡುಗಳ ಮೂಲಕವೇ ಶುರುವಾಗುತ್ತಿದ್ದವು. ಹೋರಾಟದ ಪ್ರಭಾವದಿಂದಾಗಿ ಪ್ರತಿ ಜಿಲ್ಲೆಯಲ್ಲಿ ಹಾಡುಗಾರರು ಸೃಷ್ಟಿಯಾದರು. ಒಂದು ವಿಚಾರಪ್ರೇರಿತ ಭಾಷಣವು ಮಾಡುವ ಪರಿಣಾಮಕ್ಕಿಂತ ಹತ್ತು ಪಟ್ಟು, ನೂರು ಪಟ್ಟು ಪರಿಣಾಮಗಳನ್ನು ದಲಿತ ಕಲಾವಿದರು ಹಾಡಿದ ಒಂದು ಹಾಡು ಉಂಟು ಮಾಡುತ್ತಿತ್ತು."[3] ನೀರಿಗಾಗಿ, ಭೂಮಿಗಾಗಿ, ಶಿಕ್ಷಣಕ್ಕಾಗಿ ಅಂಬೇಡ್ಕರ್ ಜೀವನ ಪೂರ್ತಿ ಹೋರಾಡಿದರು. ಅವರ ಚಿಂತನೆಗಳು ಮನುಷ್ಯರೆಲ್ಲ ಒಂದೇ ಎಂಬುದಾಗಿತ್ತು. ನಡೆಯುವ ನೆಲವೊಂದೇ ಕುಡಿಯುವ ಜಲವೊಂದೇ ಸುಡುವ ಬೆಂಕಿಯೂ ಒಂದೇ ಉಸಿರಾಡುವ ಗಾಳಿಯೂ ಒಂದೇ ಈ ಇವೆಲ್ಲವೂ ಪ್ರಕೃತಿಯ ಸ್ವಾಭಾವಿಕ ಕೊಡುಗೆ. ಇಂತಹ ಮೂಲಭೂತ ಅವಶ್ಯಕತೆಗಳಿಂದ ವಂಚಿತರಾಗಿದ್ದವರನ್ನು, ವಂಚಕರನ್ನು ಕುರಿತ ಚಿಂತನೆಗಳೇ ಹೋರಾಟಗಳ ಹಾಡುಗಳ ಜೀವಾಳ.

ಹಾಡೇ ಅಂಬೇಡ್ಕರ್ ಎಂಬ ಕವನ ಸಂಕಲನದಲ್ಲಿನ ಒಂದು ಕವನದಲ್ಲಿ ಅಂಬೇಡ್ಕರ್ ಅವರು ನೀರಿಗಾಗಿ ಹೋರಾಡಿದ ಚಿತ್ರಣ ಸರಳವಾಗಿ ಮೂಡಿಬಂದಿದೆ. "ಹಾಡುಗಾರ್ತಿ ಕುಸುಮ್ ಸೋನಾವಾನೆ ಈ ಹಾಡಿನಲ್ಲಿ ಐತಿಹಾಸಿಕವಾದ ಮಹಾಡ್ ಸತ್ಯಾಗ್ರಹದ ಬಗೆಗೆ ಹದಿನಾಲ್ಕು ಚರಣಗಳನ್ನು ಹಾಡಿದ್ದಾರೆ.

ಚವಡಾರಕೆರೆಯ ಬಳಿ ಒಂದು ಗುಟುಕು ನೀರಿಗಾಗಿ ನಡೆದ ಹೋರಾಟವೇ ಇಲ್ಲಿ ಹಾಡಾಗಿ ಚಿತ್ರಿತವಾಗಿದೆ." [4] ಮಾರ್ಚ್ 20 1927ರಂದು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬಾಂಬೆ ಪ್ರೆಸಿಡೆನ್ಸಿಯ ಕಲಬ ಜಿಲ್ಲೆಯ ಮಹಾಡ್ ಗ್ರಾಮದಲ್ಲಿರುವ ಚವಡಾರ್‌ಕೆರೆಯ ನೀರನ್ನು ಸ್ಪರ್ಶಿಸುವುದರ ಮೂಲಕ ಸಮಾನತೆಗಾಗಿ ದೊಡ್ಡ ಹೋರಾಟವನ್ನು ಮಾಡಿದರು. "ಅವರೊಂದಿಗೆ ಅವರ ಮೂರು ಸಾವಿರ ಅನುಯಾಯಿಗಳು ಕೂಡ ನೀರಿನ ರುಚಿಯನ್ನು ನೋಡಿದರು. ಆ ಮೂಲಕ ಸಾರ್ವಜನಿಕ ಕೆರೆಗಳ ನೀರನ್ನು ದಲಿತರು ಮುಟ್ಟುವಂತಿಲ್ಲ ಎಂಬ ಸವರ್ಣೀಯರ ಕಟ್ಟಳೆಗಳನ್ನು ಅಂಬೇಡ್ಕರ್ ಅವರು ಮುರಿದು ಹಾಕಿದರು."[5]

ಅಕ್ಕ ತಂಗ್ಯಾರೇ ನೀವೆಲ್ಲ ಬನ್ನಿ
ಚವಡಾರ್ ಕೆರೆ ನೀರ ತುಂಬಲು ಬಿಂದಿಗೆ ತನ್ನಿ
ಭೀಮ ತಾಯಿಯ ಮಗ ಭೀಮರಾಯ
ಕರೆಯ ಕಳಿಸ್ಯಾವೆ ಹೋಗು ಬಾರಾ
ನಾಲ್ಕು ಬೆರಳದ್ದಿ ಕೆರೆಯ ನೀರಿನೊಳಗೆ
ಎಂಥ ತಂಪಿನನುಭವ ಮನದ ಒಳಗೆ
ಬದಲಾವಣೆ ಎಂದರೆ ಇದುವೆ ತಾಯೆ
ನಿಂತು ನುಡಿದಾನೆ ಭೀಮರಾಯ ಕೇಳ
ಎಂಥ ಶಾಸ್ತ್ರದ ಮಂದಿ ನೋಡವರ
ಹರಿವ ನೀರಿಗೂ ಜಾತಿ ಅಂಟಿಸ್ಯಾರ
ಸತ್ಯಾಗ್ರಹವ ನಡ್ಯಾಸ್ಸಾರೆ ಹೆಣ್ಣುಗಳು
ಕಲ್ಲಿನ ಮಳೆಯ ಸುರಿಸ್ಯಾರೇ, ಮೇಲಿನವರು

ಮನುಷ್ಯರಿಗಲ್ಲದೇ ಪ್ರಾಣಿಗಳಿಗೂ ಕೆರೆಯ ನೀರನ್ನು ಕುಡಿಯಲು ಮುಕ್ತ ಅವಕಾಶವಿರುವಾಗ ಜಾತಿಯ ಕಾರಣಕ್ಕಾಗಿ ನೀರಿನ ಬಳಕೆಯ ಹಕ್ಕನ್ನು ನಿರಾಕರಿಸುವುದು ಎಷ್ಟು ಅಮಾನವೀಯ ಎಂಬುದನ್ನು ನಾವಿಲ್ಲಿ ಗಮನಿಸಬೇಕಾಗಿದೆ.

ಇದೇ ಸಂಕಲನದಲ್ಲಿ ಕುಸುಮ್ ಸೋನಾವಾನೆ ಅವರು ಹಾಡಿರುವ ಮತದಾನದ ಹಕ್ಕು ಹಾಡು ಗಮನ ಸೆಳೆಯುತ್ತವೆ.

ಮತದಾನ ಹಕ್ಕು ಮತದಾನ ಹಕ್ಕು
ನಮಗಿನ್ನೂ ಸಿಕ್ಕಿರಲಿಲ್ಲ ಮತದಾನದ ಹಕ್ಕು

ನಮ್ಮ ಭೀಮರಾಯ ನಮ್ಮ ಭೀಮ ರಾಯ
ಮತದಾನದ ಹಕ್ಕನ್ನು ನಮಗೆ ದೊರಕಿಸಿಕೊಟ್ಟ...

ಹಾಗೆಯೇ ಮೀಸಲಾತಿ ಹಕ್ಕು ಮೀಸಲಾತಿಯ ಹಕ್ಕು
ನಮಗಿನ್ನೂ ದೊರಕಿರಲಿಲ್ಲ ಮೀಸಲಾತಿಯ ಹಕ್ಕು
ನಮ್ಮ ಭೀಮರಾಯ ನಮ್ಮ ಭೀಮರಾಯ
ಮೀಸಲಾತಿಯ ಹಕ್ಕನ್ನು ನಮಗೆ ದೊರಕಿಸಿಕೊಟ್ಟ

ಎಂದು ಒಂದು ಚರಣದಲ್ಲಿ ಹಾಡಿದರೆ ಮತ್ತೊಂದು ಚರಣದಲ್ಲಿ ದೇವಾಲಯದ ಪ್ರವೇಶದ ಹಕ್ಕನ್ನು ಪ್ರತಿಪಾದಿಸಿದ ವಿವರಗಳು ತೆರೆದುಕೊಳ್ಳುತ್ತವೆ.

ಅಕ್ಕತಂಗಿಯರೇ ಕೇಳಿ ರಾಮಜೀಯ ಮಗನಾ ಕಥೆಯ
ಎಂಥೆಂಥ ಒಳ್ಳೊಳ್ಳೆಯ ಕೆಲಸ ಮಾಡಿದನು
ಕಾಳಾ ರಾಮಮಂದಿರದ ಮುಚ್ಚಿದ ಬಾಗಿಲನ
ದಲಿತ ಜನರಿಗಾಗಿ ಭೀಮರಾಯ ತೆರೆದನು.

1927ರಲ್ಲಿ ದೇವಾಲಯವನ್ನು ಪ್ರವೇಶಿಸುವುದರ ಮೂಲಕ ಹುಟ್ಟಿನ ಕಾರಣಕ್ಕಾಗಿ ಭೇದಭಾವ ಸಲ್ಲವೆಂದು ಸಮಾನತೆಯ ಪಾಠವನ್ನು ಭೀಮ ಹೇಳಿಕೊಟ್ಟ ಎಂಬುದನ್ನು ಸಾಮಾನ್ಯ ಮಹಿಳೆ ಹಾಡುಕಟ್ಟಿ ಹಾಡುವುದರ ಮೂಲಕ ಅಂಬೇಡ್ಕರ್ ಚಿಂತನೆಗಳಿಗೆ ಜೀವ ತುಂಬಿದ್ದಾರೆ.

ಕರ್ನಾಟಕದ ಮಟ್ಟಿಗೆ ಕನ್ನಡ ನಾಡಿನ ದೀನ ದಲಿತರ ಪ್ರತಿನಿಧಿಯಾಗಿ ಅಂಬೇಡ್ಕರ್ ಚಿಂತನೆಗಳನ್ನು ಅಕ್ಷರ ಸಹ ಅನುಷ್ಠಾನಗೊಳಿಸಲು ಪಣತೊಟ್ಟವರಂತೆ ಗಟ್ಟಿಯಾಗಿ ನಿಂತವರು, ಬರೆದವರು ಡಾ.ಸಿದ್ಧಲಿಂಗಯ್ಯನವರು. 1947ರ ಸ್ವಾತಂತ್ರ್ಯ ಕವಿತೆಯಲ್ಲಿ ಅವರು ದೀನದಲಿತರಿಗೆ ಬಡವಬಗ್ಗರಿಗೆ ಸ್ವಾತಂತ್ರ್ಯ ಬರಲೇ ಇಲ್ಲ ಎಂದು ಪ್ರತಿಪಾದಿಸುತ್ತಾರೆ.

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲಾಜೇಬಿಗೆ ಬಂತು
ಜನಗಳ ತಿನ್ನುವ ಬಾಯಿಗೆ ಬಂತು
ನಲವತ್ತೇಳ ಸ್ವಾತಂತ್ರ್ಯ
ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ ಎಂದು ಸ್ಪಷ್ಟ ಪಡಿಸಿದ್ದಾರೆ.

ಸಿದ್ಧಲಿಂಗಯ್ಯನವರಂತೆಯೇ ಚಿಂತಿಸುವ ತೆಲುಗಿನ ಕವಿಯೋರ್ವನ ಕವಿತೆಯಲ್ಲಿ ಕಾರ್ಮಿಕ ವರ್ಗದ ಪಡಿಪಾಟಲುಗಳ ಚಿತ್ರಣ ಕಣ್ಣಿಗೆ ಕಟ್ಟುವಂತೆ ಮೂಡಿಬಂದಿದೆ.

ರಿಕ್ಷಾ ತುಳಿವ ರಹಿಮಣ್ಣ
ಕಲ್ಲು ಹೊಡೆವ ಕಾಮಣ್ಣ
ಡ್ರೈವರ ಮಲ್ಲಣ್ಣ ಹಮಾಲಿ ಹನುಮಣ್ಣ
ಏತ ತುಳಿವ ಎಲ್ಲಣ್ಣ
ನೇಗಿಲೊಡೆವ ನಾಗಣ್ಣ
ಮನ್ನಿಸಿ ನಮ್ಮ ಮಾತು
ಕೇಳಿರೋ ರೈತಣ್ಣ

ಇತ್ಯಾದಿ ಸಾಲುಗಳಲ್ಲಿ ಅಂಬೇಡ್ಕರ್ ಚಿಂತನೆಯ ದ್ಯೋತಕವಾದ ಸಮಾನತೆಗಾಗಿ ಸಂಘಟಿತರಾಗಬೇಕೆಂಬ ನಿಲುವಿದೆ. ಎಲ್ಲ ದುಡಿವ ವರ್ಗದ ನೋವಿಗೆ ಸ್ಪಂದಿಸುವ ಧ್ವನಿಯಿದೆ.

ತೆಲುಗು ನಾಡಿನ ಕ್ರಾಂತಿಕವಿ ಗದ್ದರ್ ಅವರು ಸಾವಿರಾರು ಕ್ರಾಂತಿ ಗೀತೆಗಳನ್ನು ರಚಿಸಿದ್ದಾರೆ. ತಾವೇ ದೇಶಾದ್ಯಂತ ಸುತ್ತಿ ಯುವಕರನ್ನು ಸಂಘಟಿಸಿ ಅಂಬೇಡ್ಕರ್ ಚಿಂತನೆಗಳನ್ನು ಬಿತ್ತಿ ಬೆಳೆದಿದ್ದಾರೆ.

ಈ ದೇಶ ಯಾರದೋ
ಈ ದೇಶ ನಮ್ಮದೋ
ಭೂಮಿ ಉಳುವ ರೈತನದೂ
ಜೀತ ಮಾಡುವ ಜನಗಳದೂ
ದುಡಿಮೆಯೇ ನಮ್ಮ ಆಸ್ತಿಯನುವ
ಕೂಲಿ ಕಾರ್ಮಿಕ ಜನಗಳದೂ

ಮುಂತಾಗಿ ಹಾಡುವುದರ ಮೂಲಕ ಈ ದೇಶದ ರೂವಾರಿಗಳು, ವಾರಸುದಾರರು, ಭೂಮಿಯನ್ನು ಉಳ್ಳವರು ಭೂಮಿಯಲ್ಲಿ ಜೀತದಾಳುಗಳಾಗಿ ದುಡಿಯುವರು ಎಂಬ ವಾಸ್ತವ ಸತ್ಯವನ್ನು ವಿದ್ಯಾರ್ಥಿಗಳಲ್ಲಿ ರೈತರಲ್ಲಿ ಮನವರಿಕೆ ಮಾಡಿಕೊಟ್ಟರು.

ಜಾತಿಯ ಭೂತವನ್ನು ಬೇರು ಸಹಿತ ಕಿತ್ತೊಗೆಯಬೇಕೆಂದು ಬಯಸಿದ ಅಂಬೇಡ್ಕರ್ ಚಿಂತನೆಯನ್ನು ಅನುಷ್ಠಾನಗೊಳಿಸಲೆಂದು ಸಾವಿರಾರು ವಿದ್ಯಾವಂತ ಯುವಕರು ಹೋರಾಟದ

ಹಾಡುಗಳನ್ನು ರಚಿಸಿದರು. ಅಂತವರಲ್ಲಿ ಚೆರ ಬಂಡರಾಜು ಮುಖ್ಯವಾಗಿ ಗುರುತಿಸ ತಕ್ಕವರು. ಅವರು ಯಾ ಕುಲವಯ್ಯಾ ಹಾಡು ಜನಪ್ರಿಯವಾದುದು.

ಯಾಕುಲವಯ್ಯಾ
ನಮ್ಮದ್ಯಾವ ಮತವಯ್ಯ
ಮಣ್ಣು ಕಲಸಿ ಇಟ್ಟಿಗೆ ಮಾಡಿ
ಮನೆಯ ಕಟ್ಟಿ ಕೊಟ್ಟಾಗ
ಮೈ ಸವಸಿ ಉತ್ತು ಬಿತ್ತು
ಧ್ಯಾನ ರಾಸಿ ಹೊತ್ತಾಗ
ಮರ ಕಡಿದು ತೊಲೆ ಹೊತ್ತು
ಮಂಚ ಮೇಜು ಮಾಡಿದಾಗ
ಖಂಡ ಹಿಂಡಿ ಬಂಡೆ ಒಡೆದು
ವಿಗ್ರಹಗಳ ಕೆತ್ತಿದಾಗ ಯಾಕುಲವಯ್ಯಾ
ಬೆಂಕಿ ಕುಲುಮೆಯಾಗಿ ಹೊಟ್ಟೆ
ಮಚ್ಚು ಹಾರೆ ಮಾಡಿದಾಗ
ಕ್ಷಯದಿ ನಾವು ಕೆಮ್ಮಿ ಕೆಮ್ಮಿ

ಇದ್ದಿಲು ಗಣಿಗಳಿ ಇಳಿದಾಗ
ಪೂಜೆಗಾಗಿ ಹೂವು ಒಯ್ಯಲು
ಬುಟಿ ಹೆಣೆದು ಕೊಟ್ಟಾಗ
ರಾಮಕೋಟಿ ಬರೆಯ ನಿಮಗೆ
ಮಸಿಯ ಮಾಡಿ ಕೊಟ್ಟಾಗ
ದನದ ಕೊರಳ ಕೊಯ್ದು ನಿಮಗೆ
ಕೆರ ಹೊಲೆದು ಕೊಟ್ಟಾಗ
ಕರುಳಿಗಿಷ್ಟು ಕೂಳಿರದೆ
ಮಡಕೆ ಮಾಡಿಕೊಟ್ಟಾಗ”[6] ಯಾಕುಲವಯ್ಯಾ
ನಮ್ಮದು ಯಾಕುಲವಯ್ಯಾ

ಹೀಗೆ ಆಯಗಾರರಾಗಿ ಎಲ್ಲ ಕಾರ್ಮಿಕರು ದುಡಿದು ನಿಮಗೆ ನೆರವಾದಾಗ ಯಾವ ಕುಲ ಯಾವ ಜಾತಿ ಯಾವುದು ಹೆಚ್ಚು ಯಾವುದು ಕೀಳು ಎಂದು ಗಟ್ಟಿ ಧ್ವನಿಯಲ್ಲಿ ಪ್ರಶ್ನಿಸುವಂತೆ ಮಾಡಿದ್ದು ಅಂಬೇಡ್ಕರ್ ಅರಿವು ಎಂಬುದನ್ನು ಮರೆಯುವಂತಿಲ್ಲ. ವಿಶ್ವವಿಜ್ಞಾನಿ ಅಂಬೇಡ್ಕರ್ ಆಕಾಶದಗಲಕ್ಕೂ ನಿಂತ ಆಲದಂತೆ. ಎಲ್ಲ ಸಮುದಾಯದ ನೆಮ್ಮದಿಯ ಬದುಕಿಗೆ ಬೇಕಾದ ಭಗವದ್ಗೀತೆಗೂ ಮಿಗಿಲಾದ ಮಾನವೀಯ ಮೌಲ್ಯಗಳ ಕಣಜದಂತಿರುವ ಸಂವಿಧಾನವನ್ನು ರಚಿಸಿ ಕೊಟ್ಟ ದಾರ್ಶನಿಕರು.

ಹೋರಾಟದ ಹಾಡುಗಳ ಪರಿಪೂರ್ಣ ಆಂತರಿಕ ಚೇತನ ಅಂಬೇಡ್ಕರ್ ಅವರ ಚಿಂತನೆಗಳಲ್ಲಿ ಅಡಗಿವೆ ಎಂಬುದನ್ನು ಈ ಲೇಖನದ ಮೂಲಕ ಇಲ್ಲಿ ಬೆಳಕನ್ನು ಚೆಲ್ಲಲಾಗಿದೆ. ಡಾ.ಅಂಬೇಡ್ಕರ್ ಚಿಂತನೆ ವಿಶಾಲವಾದುದು ಸರ್ವರನ್ನು ಒಳಗೊಂಡದ್ದು. ದೀನದಲಿತ ಅಸ್ಪೃಶ್ಯರಂತೆ ತುಳಿತಕ್ಕೊಳಗಾದವರು ಮಹಿಳೆಯರು ಎಂಬುದು ಅವರಿಗೆ ಚೆನ್ನಾಗಿ ತಿಳಿದಿತ್ತು. ಸಮಾಜದಲ್ಲಿ ಮಹಿಳೆಯೂ ಸಮಾನವಾಗಿ ಬದುಕಲು ಅವಕಾಶಮಾಡಿಕೊಡಬೇಕೆಂದು ಬಲವಾಗಿ ಪ್ರತಿಪಾದಿಸಿದರು. ಅನೇಕ ನಾಯಕರನ್ನು ಈ ಕಾರಣಕ್ಕೆ ಎದುರಾಕಿಕೊಂಡರು. ತನ್ನ ಕೋರಿಕೆ ಈಡೇರದಾದಾಗ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬಂದರು. ಇದೆಲ್ಲವನ್ನು ಅಧ್ಯಯನ ಮಾಡಿದ ವಿದ್ಯಾವಂತ ಪ್ರಜ್ಞಾವಂತ ಯುವಕರು ಮಹಿಳೆಯ ಪರವಾಗಿ ಪದ್ಯ ರಚಿಸಿ ಹಾಡಿದರು.

ಸೆರಗು ಸೊಂಟಕ್ಕೆ ಸುತ್ತಿಕೋ ತಂಗ್ಯವ್ವ  
ಕುಡಗೋಲು ಕೈಗೆತ್ತಿಕೋ ತಂಗ್ಯವ್ವ  
ಹಸುಗೂಸು ಅತ್ತರೂ ಹಾಲುಣಿಸಲು ಬಿಡರು  
ನಡಮುರಿದು ಹೋದರೂ ನಾಟ್ಯಾಕು ಅಂತಾರೆ  
ದಿನವಿಡೀ ನೀ ದುಡಿದರು ತಂಗ್ಯವ್ವ  
ದಿನವಲ್ಲ ಉಪವಾಸವೇ ತಂಗ್ಯವ್ವ" (ತೆಲುಗುಮೂಲ)

ಹೀಗೆ ಮಹಿಳೆಯರಲ್ಲಿ ಜಾಗೃತಿ ಮೂಡಿಸಲು ಅನೇಕ ಕವಿತೆಗಳು ರಚನೆಯಾಗಿವೆ. ಇದಕ್ಕೆಲ್ಲ ಪ್ರೇರಣೆ ಅಂಬೇಡ್ಕರ್ ಅವರ ಚಿಂತನೆಗಳೇ ಎಂಬುದನ್ನು ಮರೆಯುವಂತಿಲ್ಲ.

ಒಟ್ಟಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಾತಿ ವಿರೋಧಿ ತತ್ವಶಾಸ್ತ್ರ ಮತ್ತು ಸಂಘರ್ಷಗಳ ಸಂಯೋಜಕರಾಗಿದ್ದಾರೆ. ಜಾತಿ, ಅಸ್ಪೃಶ್ಯತೆ, ಧರ್ಮ, ಪ್ರಜಾತಂತ್ರ ಮತ್ತು ದಲಿತರ ಸ್ಥಿತಿಗತಿಗಳನ್ನು ಕುರಿತಂತೆ ಅವರ ದೃಷ್ಟಿಕೋನ ಭಾರತೀಯ ಸಮಾಜವಿಂದು ಸಮರ್ಪಕವಾಗಿ ಗ್ರಹಿಸಲು ಅನುಕೂಲಕರವಾಗಿದೆ. ಅವರ ಬರಹಗಳು ಮತ್ತು ಹೋರಾಟಗಳು ದಮನಿತ ಸಮುದಾಯಗಳ ವಿಶೇಷವಾಗಿ ಅಸ್ಪೃಶ್ಯ ಸಮುದಾಯದ ಲಕ್ಷಾಂತರ ಜನರ ಹೋರಾಟಗಳಿಗೆ ಮುಖ್ಯಸ್ಫೂರ್ತಿಯಾಗಿದೆ.

**ಕೊನೆ ಟಿಪ್ಪಣಿಗಳು**

[1] .ಅರವಿಂದ ಮಾಲಗತ್ತಿ ಅವರ ಕಾವ್ಯದ ವಿಮರ್ಶೆ, (ಸಂ), ಡಾ.ಅರ್ಜುನ ಗೊಳಸಂಗಿ, ದಲಿತ ಸಾಹಿತ್ಯ ಪರಿಷತ್ತು, ರಾಜ್ಯ ಘಟಕ ಗದಗ–2009

[2] . ಅದೇ, ಪುಟ,64

[3] . ವೆಂಕಟೇಶ್, ಎಚ್.ಜ್ಯೋತಿ,ಎಸ್(ಸಂ), ಹೋರಾಟದ ಹಾಡುಗಳು, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ–2022, ಪುಟ–3

[4] . ಪರಿ(ಸಂಗ್ರಹ) ಅನುವಾದ, ಸುಧಾ ಆಡುಕುಳ, ಲಡಾಯಿ ಪ್ರಕಾಶನ ಗದಗ–2021, ಪುಟ.25,

[5] . ಅದೇ, ಪುಟ–25

[6] . ಗಂಗಾರಾಮ್ ಚಂಡಾಳ(ಸಂ),ಹೋರಾಟದ ಹಾಡುಗಳ ಚರಿತ್ರೆ,ಚೈತ್ರ ಪ್ರಕಾಶನ,ಮೈಸೂರು–2020, ಪುಟ.103

**ಪರಾಮರ್ಶನ ಗ್ರಂಥಗಳು**


1. ಗಂಗಾರಾಮ ಚಂಡಾಳ(ಸಂ)ಹೋರಾಟದ ಹಾಡುಗಳ ಚರಿತ್ರೆ, ಚೈತ್ರ ಪ್ರಕಾಶನ, ಮೈಸೂರು, 2020
2. ಪರಿ(ಸಂಗ್ರಹ)ಅಮ ಸುಧಾ ಆಡುಕುಳ, ಹಾಡೇ ಅಂಬೇಡ್ಕರ್,ಲಡಾಯಿಪ್ರಕಾಶನ,ಗದಗ–2021
3. ವೆಂಕಟೇಶ್ ಎಚ್., ಜ್ಯೋತಿ.ಎಸ್(ಸಂ) ಹೋರಾಟದ ಹಾಡುಗಳು–ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.
4. ಅರವಿಂದ ಮಾಲಗತ್ತಿ, ದಲಿತ ಸಾಹಿತ್ಯ ಪ್ರವೇಶಿಕೆ, ಶೈಲ ಪ್ರಕಾಶನ ಮುದ್ದೇಬಿಹಾಳ, 1997
5. ಶಿವಕುಮಾರ್,ಅಂಬೇಡ್ಕರ್‌ವಾದ ಮತ್ತು ದಲಿತ ಸಾಹಿತ್ಯ, ಸುಮೇಧಪ್ರಕಾಶನಗುಲ್ಬರ್ಗ–2008
6. ಸಿದ್ಧಲಿಂಗಯ್ಯ, ನನ್ನ ಜನಗಳು ಮತ್ತು ಇತರ ಕವಿತೆಗಳು, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು.